**ಸಾಕ್ಷಿಯನ್ನು ದಿಃ *12/09/2023* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು ಃ ಪ್ರತಿವಾದಿಯ ಪರ ವಕೀಲರಿಂದ.***

ಮೂಲ ವಾದಿಯಾದ ಚಂದ್ರಾಬಾಯಿ ನನ್ನ ಅಕ್ಕ. ವಿದ್ಯಾವತಿ ನನ್ನ ಪತ್ನಿ. ಚಂದ್ರಾಬಾಯಿಗೆ ಇಬ್ಬರೂ ಗಂಡುಮಕ್ಕಳು ಎಂದರೆ ನಿಜ, ಅವರು ರಮೇಶ ಮತ್ತು ನೇಮಣ್ಣ. ನೇಮಣ್ಣ ಇವರು ಯಾವುದೇ ಕೆಲಸ ಮಾಡುತ್ತಿರಲಿಲ್ಲ. ವಾದಿಯ ಪತಿ ಅಂಚೆ ಇಲಾಖೆಯಲ್ಲಿ ಪೋಸ್ಟ ಮಾಸ್ಟರ ಆಗಿದ್ದರು. ಅವರು ತೀರಿಕೊಂಡು ಅಂದಾಜು 30-35 ವರ್ಷವಾಗಿರಬಹುದು. ಸದರಿ ಸಮಯದಲ್ಲಿ ನಮ್ಮ ಮದುವೆಯಾಗಿರಲಿಲ್ಲ, ಅವರು ತೀರಿಹೋದ 22 ವರ್ಷದ ನಂತರ ಅವರ ಮಗಳನ್ನು ನಾನು ಮದುವೆ ಮಾಡಿಕೊಂಡಿರುತ್ತೇನೆ. ನನಗೆ ಈಗ 61 ವರ್ಷ. ನನ್ನ ಮಾವ ತೀರಿಹೋದಾಗ ನನ್ನ ವಯಸ್ಸು 36 ವರ್ಷ ಇರಬಹುದು. ನನ್ನ ಪತ್ನಿಗೆ 24-25 ವರ್ಷ ವಯಸ್ಸು ಇತ್ತು. ಅಂದರೆ ನನ್ನ ಪತ್ನಿಯ ವಯಸ್ಸು 46 ವರ್ಷಗಳು ಇರುವಾಗ ನನ್ನ ಮದುವೆಯಾಗಿದೆ ಎಂದರೆ ಸರಿಯಲ್ಲ.

ನನ್ನ ಮಾವ ತೀರಿಹೋದಾಗ ಅವರಿಗೆ ಎಷ್ಟು ಮೊತ್ತದ ಸೇವಾ ಸೌಲಭ್ಯ ಪಡೆದಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ. ಸದರಿ ಮೊತ್ತವನ್ನು ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮದುವೆಯಲ್ಲಿ  ನನ್ನ ಅಕ್ಕ ಯೋಗ್ಯ ವರೋಪಚಾರ ನೀಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಪತ್ನಿಯ ಅಕ್ಕಳಾದ ಸುಮನ ಇವರನ್ನು ಸಹ ನನ್ನ ಅಕ್ಕನೇ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿದಾರರು ಗಂಡಿನ ಮನೆಯವರೇ ಮದುವೆ ಮಾಡಿಕೊಂಡಿರುತ್ತಾರೆ ಎಂದು ಹೇಳುತ್ತಾರೆ. ಸುಮನ ಇವರ ಪತಿ ಸರಕಾರಿ ನೌಕರರು ಎಂದರೆ ನಿಜ. ಸದರಿಯವರಿಗೆ ಏನೂ ವರೋಪಚಾರ ಕೊಟ್ಟಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ.

ನನ್ನ ಅಕ್ಕನ ಮಗ ರಮೇಶ ಅನುಕಂಪದ ಅಧಾರದ ಮೇಲೆ 1988-89 ರಲ್ಲಿ ಅಂಚೆ ಇಲಾಖೆಯಲ್ಲಿ ನೌಕರಿಗೆ ಸೇರಿಕೊಂಡಿರುತ್ತಾನೆ. ಈ ರೀತಿ ನೌಕರಿ ಸೇರಿದ ನಂತರ ಅಕ್ಕ ತಂಗಿಯರ ಮದುವೆಯಾಗಿದೆ ಎಂದರೆ ನಿಜ. ನನ್ನ ಅಕ್ಕನ ಮನೆತನದ ವ್ಯವಹಾರಗಳ ಬಗ್ಗೆ ನನಗೆ ಪೂರ್ಣ ಮಾಹಿತಿ ಇರುವುದಿಲ್ಲ. ನನ್ನ ಮಾವನ ಬ್ಯಾಂಕ ಖಾತೆಯಲ್ಲಿ ಎಷ್ಟು ಹಣವಿತ್ತು ಮತ್ತು ಆಸ್ತಿಗಳ ಕುರಿತು ನನಗೆ ಮಾಹಿತಿ ಇಲ್ಲ.

ದಾವಾದಾಸ್ತಿಯಾದ ರಾಯಬಾಗ ತಾಲೂಕಿನ ಬೆಕ್ಕೇರಿ ಗ್ರಾಮದ ಜಮೀನಿನ ಉತಾರದಲ್ಲಿ ಕಾಂಬ್ಳೆ ಯಮನಪ್ಪ ಭೀಮಾ ಎನ್ನುವವರ ಹೆಸರು ದಾಖಲು ಇರುತ್ತದೆ ಎಂದರೆ ನಿಜ. ಸದರಿ ಯಮನಪ್ಪ ನನ್ನ ಮಾವನಾದ ನಾರಯಣ ಇವರ ಸಹೋದರ, ಅವರಿಗೆ 30 ಗುಂಟೆಯಷ್ಟು ಜಮೀನಿನ ಪಾಲು ಇರುತ್ತದೆ. ಅವರ ಮೂಲ ಊರಾದ ಬೆಕ್ಕೇರಿ ಗ್ರಾಮದಲ್ಲಿ ಮನೆ ಇರುವುದಿಲ್ಲ. ನಾರಾಯಣನಿಗೆ ಮತ್ತು ಯಮನಪ್ಪನಿಗೆ ಪಾಲು ಆಗಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ನಿಜ.

ಧಾರವಾಡದಲ್ಲಿ 2003 ನೇ ಇಸ್ವಿಯಲ್ಲಿ ರಮೇಶನ ಹೆಸರ ಮೇಲೆ ಮನೆ ಖರೀದಿ ಮಾಡಿದ್ದಾರೆ ಎಂದರೆ ನಿಜ. ರಮೇಶ ಖರೀದಿ ಮಾಡುವ ಸಮಯದಲ್ಲಿ ಸದರಿ ಮನೆಯಲ್ಲಿ ಮೂರು ಭಾಗಗಳು ಇರುತ್ತವೆ ಎಂದರೆ ನಿಜ. ರಮೇಶ ಜೀವಂತವಿರುವ ಕಾಲಕ್ಕೆ ಒಂದು ಭಾಗದಲ್ಲಿ ತನ್ನ ಕುಟುಂಬದೊಂದಿಗೆ ವಾಸವಿದ್ದ ಎಂದರೆ ಸಾಕ್ಷಿದಾರರು ಎಲ್ಲರೂ ಒಂದೇ ಮನೆಯಲ್ಲಿ ಕೂಡಿ ಇರುತ್ತಾರೆ ಎಂದು ಹೇಳುತ್ತಾರೆ. ತಾಯಿ  ಮತ್ತೊಂದು ಮನೆಯಲ್ಲಿ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿಯಲ್ಲ. ಮತ್ತೊಂದು ಮನೆ ಒಂದು ಸಾವಿರ ರೂಪಾಯಿಗೆ ಬಾಡಿಗೆಗೆ ಕೊಟ್ಟಿದ್ದರು ಎಂದರೆ ನಿಜ. ರಮೇಶ ತೀರಿಹೋದ ಕಾಲಕ್ಕೆ ನನ್ನ ಅಕ್ಕ ಚಂದ್ರಾಬಾಯಿ ನನ್ನ ಮನೆಯಲ್ಲಿ ಮುಗಳಖೋಡದಲ್ಲಿದ್ದರು ಎಂದರೆ ಸರಿಯಲ್ಲ. ರಮೇಶ ತೀರಿಹೋದ ನಂತರ ಒಂದು ಮನಯಲ್ಲಿ ವಾಸವಿದ್ದು, ಎರಡು ಮನೆಗಳನ್ನು ಬಾಡಿಗೆಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಬಾಡಿಗೆ ಹಣ ಎಷ್ಟು ಬರುತ್ತದೆ ಎಂದು ನನಗೆ ವಾದ ಪತ್ರದಲ್ಲಿ ನಮೂದಿಸಲು ತೊಂದರೆ ಇರಲಿಲ್ಲ ಎಂದರೆ ನಿಜ. ಸದರಿ ಬಾಡಿಗೆ ಹಣ ಉದ್ದೇಶಪೂರ್ವಕವಾಗಿ ಬರೆದಿಲ್ಲ ಎಂದರೆ ಸರಿಯಲ್ಲ.

ಧಾರವಾಡದ ಮನೆಯ ಖರೀದಿ ಪತ್ರ ಹಾಜರುಪಡಿಸಿಲ್ಲ ಎಂದರೆ ಸರಿ. ಜಂಟಿ ಕುಟುಂಬದ ಉತ್ಪನ ಎಷ್ಟು ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಈ ರೀತಿ ಒಟ್ಟು ಕುಟುಂಬ ಇರಲಾರದ ಕಾರಣವೇ ನನಗೆ ಎಷ್ಟು ಉತ್ಪನವಿತ್ತು ಎಂದು ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ರಮೇಶ ನೌಕರಿಗೆ ಸೇರಿದ ಐದಾರು ವರ್ಷದ ನಂತರ ಅವರ ಅಕ್ಕ ತಂಗಿಯ ಮದುವೆಯಾಗಿರುತ್ತದೆ.

ನನ್ನ ಅಕ್ಕ ಚಂದ್ರಾಬಾಯಿಗೆ ಬರುವ ಪಿಂಚಣಿ ವಿವರಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಮಾವ ತೀರಿಹೋದ ನಂತರ ಬಂದಿರುವ ಸೇವಾ ಸೌಲಭ್ಯದ ಹಣ ನನ್ನ ಅಕ್ಕ ಮಾತ್ರ ಪಡೆದಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮನೆಯನ್ನು ಪಡೆಯಲು ರಮೇಶನು ಬ್ಯಾಂಕಿನಲ್ಲಿ 2-3 ಲಕ್ಷ ರೂಪಾಯಿ ಸಾಲ ಪಡೆದಿರಬಹುದು. ಸದರಿ ಸಾಲದಲ್ಲಿ ರಮೇಶನ್ನು ಎಷ್ಟು ಹಣವನ್ನು ಮರುಪಾವತಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ, ಆದರೆ ನಾನು ಅವರು ಜೀವಂತವಿದ್ದಾಗ ಖಾತೆಗೆ 2 ಲಕ್ಷ ರೂಪಾಯಿಗಳನ್ನು ಕಳಿಸಿರುತ್ತೇನೆ, ಕಳಿಸಿದ ದಿನಾಂಕ ನನಗೆ ನೆನಪಿಲ್ಲ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಮೇಶ ಜೀವಂತವಿದ್ದಾಗ ನಾವು ಕೊಡುವ ತೆಗೆದುಕೊಳ್ಳುವ ವ್ಯವಹಾರ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. ಆದ್ದರಿಂದ ರಮೇಶನಿಂದ ಪಡೆದ ಹಣವನ್ನು ನಾನು ಮರುಪಾವತಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ರಮೇಶ ಪತ್ನಿಯ ತಂದೆ ಕೃಷಿ ಇಲಾಖೆಯಲ್ಲಿ ಅಧಿಕಾರಿಯಾಗಿದ್ದರು ಎಂದರೆ ನಿಜ. ಅವರೇ ಮನೆ ಖರೀದಿ ಮಾಡುವುದಕ್ಕೆ ಹಣಕಾಸಿನ ಸಹಾಯ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾವು ಒಟ್ಟು 7 ಜನ ಅಣ್ಣತಮ್ಮಂದಿರು. ಆದ್ದರಿಂದ ನಾವು ರಮೇಶನಿಗೆ ಹಣಕಾಸಿನ ಸಹಾಯ ಮಾಡಿಲ್ಲ ಎಂದರೆ ಸರಿಯಲ್ಲ. ಖರೀದಿಪತ್ರವೂ ರಮೇಶನ ಹೆಸರಿನಲ್ಲಿ ಮಾತ್ರ ಇರುತ್ತದೆ ಎಂದರೆ ನಿಜ. ಸದರಿ ಮನೆ ತನ್ನ ಸ್ವಂತ ಗಳಿಕೆಯಿಂದ ಪಡೆದುಕೊಂಡ ಮನೆ ಎಂದರೆ ಸರಿಯಲ್ಲ. ಸತ್ತೂರಿನಲ್ಲಿ ಖರೀದಿ ಮಾಡಿರುವ ನಿವೇಶನ ತನ್ನ ಸ್ವಂತ ಗಳಿಕೆಯಿಂದ ಪಡೆದುಕೊಂಡ ನಿವೇಶನ ಎಂದರೆ ನಿಜ. ಆದಾಯ ತೆರಿಗೆ ಉಳಿತಾಯ ಸಲುವಾಗಿ ರಮೇಶ ವಿಮೆಗಳನ್ನು ಖರೀದಿಸಿದ್ದ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಮೆಗಳಲ್ಲಿ ನಾಮಿನಿಯಾಗಿ ತನ್ನ ಪತ್ನಿ ಹೆಸರು ಬರೆಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ.

ರಮೇಶ ತನ್ನ ಸೇವಾಸೌಲಭ್ಯದಲ್ಲಿ ತನ್ನ ತಾಯಿ ಹೆಸರಿನಲ್ಲಿ ಶೇ 25 ಪ್ರತಿಶತ ಮತ್ತು ತನ್ನ ಹೆಂಡತಿ ಹೆಸರಿನಲ್ಲಿ ಶೇ 75 ಪ್ರತಿಶತ ಸೇರಬೇಕು ಎಂದು ನಮೂದು ಮಾಡಿದ್ದಾ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲಾತಿಗಳ ಕುರಿತು ನನಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ನಿಜ. ಕಾರು ಪಡೆಯಲು ಎಷ್ಟು ಸಾಲ ತೆಗೆದಿದ್ದಾರೆ ಮತ್ತು ಎಷ್ಟು ಬಾಕಿ ಉಳಿದಿದೆ ಎಂದು ನನಗೆ ಗೊತ್ತಿಲ್ಲ. ರಮೇಶನಿಗೆ ಸಂಬಳ ಬಿಟ್ಟರೆ ಬೇರೆ ಆದಾಯವಿರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ

ಅಕ್ಕ ಪಡೆದುಕೊಳ್ಳುವ ಪಿಂಚಣಿ ಹಣ ಹೆಣ್ಣುಮಕ್ಕಳಿಗಾಗಿ ಖರ್ಚು ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮಾವ ತೀರಿಹೋದ ನಂತರ ಬಂದಿರುವ ಸೇವಾಸೌಲಭ್ಯದ ಮೊತ್ತವನ್ನು ಹೆಣ್ಣುಮಕ್ಕಳಿಗೆ ಮಾತ್ರ ಹಂಚಿಕೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ನನ್ನ ಪತ್ನಿಯೂ ತನ್ನ ಪಾಲು ಪಡೆದಿರುತ್ತಾಳೆ ಎಂದರೆ ಸರಿಯಲ್ಲ. ಈ ರೀತಿ ಇದ್ದರೂ ಸಹ ರಮೇಶನ ಪತ್ನಿಗೆ ಬಂದಿರುವ ಹಣದಲ್ಲಿ ನಮ್ಮ ಅತ್ತೆಯ ಮುಖಾಂತರ ನಾವು ಪಾಲು ಪಡೆಯಬೇಕೆಂಬುವ ದುರುದ್ದೇಶದಿಂದ ಈ ರೀತಿ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ. ಎರಡು ಖರೀದಿ ಆಸ್ತಿಗಳು ರಮೇಶನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ ನಾನಾಗಲಿ ಅಥವಾ ಇನೊರ್ವ ಸಹೋದರಿಯ ಗಂಡನಾಗಲಿ ಯಾವುದೇ ಸಹಾಯ ಮಾಡಿಲ್ಲ ಎಂದರೆ ನಿಜ. ಸಾಕ್ಷಿಯು ಮುಂದುವರೆದು ಎರಡು ಲಕ್ಷ ರೂಪಾಯಿಗಳನ್ನು ನಾನು ಕೊಟ್ಟಿರುತ್ತೆನೆ ಎಂದು ಹೇಳುತ್ತಾರೆ. ಸದರಿ ಎರಡು ಲಕ್ಷ ರೂಪಾಯಿಗಳನ್ನು ನನ್ನ ಜಮೀನಿನಿಂದ ಬಂದ ಉತ್ಪನದಿಂದ ಕೊಟ್ಟಿರುತ್ತೇನೆ, ನನಗೆ 4 ಎಕರೆ ಜಮೀನು ಇರುತ್ತದೆ, ಈ ಕುರಿತು ನಾನುಯಾವುದೇ ದಾಖಲಾತಿ ಹಾಜರುಪಡಿಸಿಲ್ಲ. ಆದ್ದರಿಂದ ಈ ಹೇಳಿಕೆಗಳನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ರೀತಿ ಇರುವಾಗ ನನ್ನ ಪತ್ನಿಗೆ ಮತ್ತು ನನ್ನ ಅಕ್ಕನಿಗಾಗಲಿ ಸದರಿ ಆಸ್ತಿಗಳಲ್ಲಿ ಯಾವುದೇ ರೀತಿ ಪಾಲು ಬರುವುದಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆಗಳು ಸರಿಯಲ್ಲ.

ನನ್ನ ಅಕ್ಕ ಪೂರ್ಣ ಆರೋಗ್ಯವಂತಳಿದ್ದಾಳೆ ಎಂದರೆ ಸರಿಯಲ್ಲ. ಯಾವ ಅನಾರೋಗ್ಯವಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ನಿಜ. ನನ್ನ ಅಕ್ಕ ನ್ಯಾಯಾಲಯಕ್ಕೆ ಸಾಕ್ಷ್ಯ ನುಡಿದರೆ ನಿಜಾಂಶ ಹೊರಬರುತ್ತದೆ ಎನ್ನುವ ಉದ್ದೇಶದಿಂದ ನನಗೆ ಮೊಕ್ತಿಯಾರ ನಾಮೆ ನೀಡಿದ್ದಾರೆ ಎಂದರೆ ಸರಿಯಲ್ಲ. ಮೊಕ್ತಿಯಾರ ನಾಮೆಯಲ್ಲಿ ಸಾಕ್ಷ್ಯ ನುಡಿಯುವ ಅಧಿಕಾರ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ರಮೇಶನ ಪತ್ನಿಯ ಆಸ್ತಿಯನ್ನು ಲಪಟಾಯಿಸುವ ದುರುದ್ದೇಶದಿಂದ ನಾನು ನನ್ನ ಪತ್ನಿ ಮತ್ತು ಅಕ್ಕ ಶಾಮೀಲಾಗಿ ಈ ರೀತಿ ಸುಳ್ಳು ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

***ಪಾಟೀ ಸವಾಲು : ಪ್ರತಿವಾದಿ ನಂ.2 ಮತ್ತು 3ರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರಿದ್ದು, ಯಾವುದೇ ಪ್ರತಿವಾದ ಪತ್ರ ಸಲ್ಲಿಸದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.***

***ಪಾಟೀ ಸವಾಲು : <u>ಪ್ರತಿವಾದಿ ನಂ.4 ಮತ್ತು 5ರ</u> ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರಿದ್ದು, ಅವರು ಸಲ್ಲಿಸಿರುವ ಪ್ರತಿವಾದ ಪತ್ರದಲ್ಲಿ ನ್ಯಾಯಾಲಯದ ಆದೇಶವನ್ನು ಅವರು ಪಾಲಿಸುತ್ತೇವೆ ಎಂದು ಹೇಳಿದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.***

***ಪಾಟೀ ಸವಾಲು : <u>ಪ್ರತಿವಾದಿ ನಂ.6ರ</u> ಪರ ವಕೀಲರಿಂದ.***

ರಮೇಶರವರು ಜೀವಂತವಿದ್ದಾಗ ಐದು ಎಲಐಸಿ ವಿಮೆ ಪಡೆದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ವಿಮೆಯಲ್ಲಿ ನಾಮಿನಿಯಾಗಿ ತನ್ನ ಪತ್ನಿಯ ಹೆಸರು ನಮೂದು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ ಅವರ ಪತ್ನಿ ಸಲ್ಲಿಸಿದ ನಾಲ್ಲು ಅರ್ಜಿಗಳನ್ನು ಪುರಸ್ಕರಿಸಿ ವಿಮೆ ಮೊತ್ತವನ್ನು ಅವರಿಗೆ ಮಾತ್ರ ಸಲ್ಲಿಸಿದ್ದು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ವಾದಿ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ನಿಜ. ಈ ರೀತಿ ಯಾವುದೇ ತಕರಾರು ಸಲ್ಲಿಸದ ಕಾರಣವೇ ಅವರ ಪತ್ನಿಗೆ ವಿಮೆ ಹಣ ಬಿಡುಗಡೆ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ.

***ಪಾಟೀ ಸವಾಲು : <u>ಪ್ರತಿವಾದಿ ನಂ.7ರ</u> ಏಕತರ್ಫಿ ಇರುತ್ತಾರೆ.***

***ಪಾಟೀ ಸವಾಲು : <u>ಪ್ರತಿವಾದಿ ನಂ.8ರ</u> ಪರ ವಕೀಲರನ್ನು ಕೂಗಿಸಲಾಯಿತು, ಗೈರು ಹಾಜರು ಇದ್ದ ಕಾರಣ ಮತ್ತು ಅವರ ಪ್ರತಿವಾದ ಪತ್ರದಲ್ಲಿ ನ್ಯಾಯಾಲಯದ ಆದೇಶವನ್ನು ಮನ್ನಣೆ ಮಾಡುವುದಾಗಿ ತಿಳಿಸಿದ್ದರಿಂದ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.***

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,

ಧಾರವಾಡ.